## ಪದಬಂಧ



ಎಡದಿಂದ ಬಲಕ್ಕೆ:

1. ನಮ್ಮನ್ನು ನಾವೇ ಆಳಿಕೊಳ್ಳುವ ಚುನಾವಣಾ ವ್ಯವಸ್ಥೆ 4
3. ಕಣ್ಣ ಮುಂದಿನ ಪರದೆಯೂ ಆಗುತ್ತದೆ, ಚಾವಣಿಯೂ ಆಗುತ್ತದೆ 3
4. ಸಮಯ ಮತ್ತು ಸಂಗ ಸಿಕ್ಕ ತಕ್ಷಣ ಶುರುವಾಯಿತು 3
6. ಶರೀರಕ್ಕೆ ತಾಕತ್ತು ನೀಡುವ ವ್ಯಾಯಾಮಶಾಲೆ ತಿರುಗಿದೆ 4
7. ದೂರದಲ್ಲಿ ಎಲ್ಲೋ ಏನೋ ಇದೆ. ಆದರೆ ಅದು ನಿಜವಲ್ಲ 4
9. ಪಾರ್ಕಲ್ಲಿ ಬೆಳಗ್ಗೆ ಎಲ್ಲರೂ ಬಾಯಗಲಿಸಿ ನಗುವ ಪರಿ 4
12. ಅಪ್ಪನ ಪ್ರೀತಿ ಸಿಕ್ಕಾಗ ತಾಯಿಯ ಪ್ರೀತಿ ಕಳೆದುಕೊಂಡ ಅವಳಿ ಸಹೋದರರು 4
15. ದಾಸರ ಹಸಿವು ನೀಗಿಸುವ ಅಕ್ಷಯಪಾತ್ರೆ 4
17. ನಮ್ಮದೇನೂ ಇಲ್ಲ, ಎಲ್ಲವೂ ಅವನದೇ ಆಜ್ಞೆ 4
18. ವಿಲಾಸ ಜೀವನ ನಡೆಸುವ ಈತನಿಗೆ ಗೊತ್ತಿಲ್ಲದ ರಸವೇ ಇಲ್ಲ 3
19. ದಾರಿಯಲ್ಲಿ ಎದುರಾಗುವ ಸಹ ಪ್ರಯಾಣಿಕ 3
20. ಭೂಮಿ, ಆಕಾಶ ಮಾತ್ರವಲ್ಲ ಪ್ರಮಾಣಕ್ಕೆ ಇದೂ ಉಂಟು 4

ಮೇಲಿನಿಂದ ಕೆಳಕ್ಕೆ

1. ಈ ವಿಷಯವನ್ನಿಟ್ಟುಕೊಂಡು ಆ ಕಡೆಯವರು, ಈ ಕಡೆಯವರದು ಸದಾ ಜಗಳ 4
2. ಸನ್ಯಾಸಿಗಳಷ್ಟೇ ಅಲ್ಲ, ಮನಸ್ಸಿನ ಶಾಂತಿಗೆ ಎಲ್ಲರಿಗೂ ಬೇಕು 4
3. ಸೂರ್ಯನೂ ಹೌದು, ನಿಲ್ಲು ಎಂದರೂ ನಿಲ್ಲದೇ ಸಾಗುವ ಚಿಟ್ಟೆಯೂ ಹೌದು 3
5. ಒಂದೊಂದು ಹೂವಿನೊಳಗೆ ಒಂದೊಂದು ಬಗೆಯ ಅಮೃತ ತಿರುಗಿದೆ 3
7. ಎಂಥದ್ದೇ ವಿಷಮ ಪರಿಸ್ಥಿತಿಯಲ್ಲೂ ಶಾಂತ ಸ್ವರೂಪಿ 3
8. ಸೂಜಿಮಲ್ಲಿಗೆ ನಿಮಗೆ ಗೊತ್ತು, ತಿರುಗಿದ ಈ ಬೆಟ್ಟದ ಮಲ್ಲಿಗೆ ಬಲ್ಲಿರಾ? 3
10. ಬಣ್ಣಗಳಷ್ಟೇ ಅಲ್ಲ, ತಿರುಗಿದ ಇದನು ಎಷ್ಟು ಬಣ್ಣಿಸಿದರೂ ಮುಗಿಯದು 3
11. ತಿರುಗಿಕೊಂಡಿರುವ ಇವನು ಇಷ್ಟೊಂದು ಮುಂಗೋಪಿಯಾದರೆ ಹೇಗೆ? 3
13. ಲಕ್ಷ್ಮಿಯನ್ನು ಹೇಗೋ ಒಲಿಸಿಕೊಂಡಿರುವ ಶ್ರೀಮಂತ 3
14. ಕಷ್ಟವನ್ನು ಕೊಟ್ಟು ಪಾಪಗಳ ಕರಗಿಸುವ ದೇವರ ಚರಿತೆ 4
15. ಹಾಲನ್ನೂ ಮೀರಿಸುವಷ್ಟು ಬೆಳ್ಳಬೆಳ್ಳಗೆ ಮಿಂಚುವ ಹಕ್ಕಿ 4
16. ದೇವರೆಲ್ಲಿದ್ದಾನೆ, ಹೇಗಿದ್ದಾನೆ ಎಂದು ಕೇಳುವ ನಿರೀಶ್ವರವಾದಿ 3

### 08–04–2021 ಉತ್ತರಗಳು

ಎಡದಿಂದ ಬಲಕ್ಕೆ:

1.ನೆಲಪದ 3.ವಿಲೀನ 4.ಶತಕ 6.ಪುರೋಗಾಮಿ 7.ಕಸರು 9.ಮಾನವಿ 11.ತಾಕೀತು 13.ಗಣಪ 15.ನಿರುಪಮ 17.ತಿಮಿರು 18.ಕನಸು 19.ತಳವಾರ

ಮೇಲಿನಿಂದ ಕೆಳಕ್ಕೆ:

1.ನೆನಪು 2.ದಶಮಿ 3.ವಿಧ್ವಂಸ 5.ಕದನ 7. ಕಲೋರಾತಾ (ತಲೆಕೆಳಗು) 8.ರುಜುವಾತು 9.ಮಾವಟಿಗ 10.ವಿಶ್ವರೂಪ 12.ಕೀರುತಿ 14. ಣಗುಸು (ತಲೆಕೆಳಗು) 15.ನಿರುತ 16.ಮಕರ

# ಆಕರ್ಷಕ ದಾಸಮಂಗಟ್ಟೆ

ಪಕ್ಷಿಪ್ರಪಂಚದಲ್ಲಿ ಅದೆಷ್ಟು ವೈವಿಧ್ಯ. ಅದೆಂಥ ಸೋಜಿಗದ ಹಕ್ಕಿಗಳು. ಒಂದೊಂದರದ್ದೂ ಒಂದೊಂದು ಗಾತ್ರ, ಬಣ್ಣ, ವಿನ್ಯಾಸ, ಗುಣಲಕ್ಷಣ. ಹಳದಿ–ಕಪ್ಪು ಸಂಯೋಜನೆಯ ಬಣ್ಣದೊಂದಿಗೆ ಸುಂದರವಾಗಿ ಕಾಣುವ ಮಂಗಟ್ಟೆಯ ಅಂದವೇ ವಿಭಿನ್ನ.

ಈ ಸುಂದರ ಹಕ್ಕಿಯ ಹೆಸರು ದಾಸಮಂಗಟ್ಟೆ. ಮಳೆಕಾಡು ಹಕ್ಕಿ, ಮಂಗಟ್ಟೆ, ಓಂಗಿಲೆ ಎಂದೂ ಕರೆಯಲಾಗುತ್ತದೆ. ಆಂಗ್ಲಭಾಷೆಯಲ್ಲಿ ಗ್ರೇಟ್ ಹಾರ್ನ್‌ಬಿಲ್. ಇದನ್ನು ಗ್ರೇಟ್ ಪೈಡ್ ಹಾರ್ನ್‌ಬಿಲ್ ಎಂದು ಕೂಡ ಕರೆಯಲಾಗುತ್ತದೆ. ಈ ಹಕ್ಕಿ ಭಾರತ, ಮಲಯಾ, ಸುಮಾತ್ರಾ, ಇಂಡೋನೇಷ್ಯಾಗಳಲ್ಲಿ ಕಂಡುಬರುತ್ತವೆ.

ಆಕರ್ಷಕ ಗಾತ್ರ ಮತ್ತು ಬಣ್ಣದಿಂದ ಈ ಪಕ್ಷಿ ನೋಡುಗರನ್ನು ತಕ್ಷಣ ಸೆಳೆಯುತ್ತದೆ. ಹೆಚ್ಚಾಗಿ ಹಣ್ಣುಗಳನ್ನು ತಿನ್ನುತ್ತವಾದರೂ ಸಸ್ತನಿ, ಸರೀಸೃಪ ಮತ್ತು ಸಣ್ಣ ಪಕ್ಷಿಗಳನ್ನು ಬೇಟೆಯಾಡುತ್ತವೆ. ಇದರ ಉದ್ದವಾದ ಕೊಕ್ಕಿನ ಮೇಲಿರುವ ಗಾಢ ಹಳದಿ ಮತ್ತು ಕಪ್ಪು ಬಣ್ಣದಲ್ಲಿರುವ ಕೊಕ್ಕಿನ ಮೇಲಿರುವ ರಕ್ಷಾಕವಚ ಹಾರ್ನ್ ಬಿಲ್‌ನ ಅತ್ಯಂತ ಪ್ರಮುಖ ಗುಣಲಕ್ಷಣ ಎನ್ನಬಹುದು. ಇದರ ಶಿರಸ್ತ್ರಾಣವನ್ನು ಮುಂದಿನಿಂದ ನೋಡಿದಾಗ ಅದು ‘ಯು’ ಆಕಾರದಲ್ಲಿ ಕಾಣಿಸುತ್ತದೆ. ಮೇಲ್ಭಾಗವು ಒಳಬಾಗಿದ್ದು, ಬದಿಗಳಲ್ಲಿ ಎರಡು ಏಣುಗಳಿದ್ದು ಅವು ಮುಂಭಾಗದಲ್ಲಿ ತುತ್ತತುದಿ(ಬಿಂದು)ಯಾಗಿ ರಚನೆಯಾಗುತ್ತವೆ. ಇದನ್ನು ಲ್ಯಾಟೀನ್ ಪ್ರಭೇದಗಳ ಬೈಕ್ರಾನಿಸ್ ಉಪನಾಮದಲ್ಲಿ ಹೇಳಲಾಗುತ್ತಿದೆ. ಶಿರಸ್ತ್ರಾಣವು ಟೊಳ್ಳಾಗಿರುತ್ತದೆ.

ಹೆಣ್ಣು ಹಾರ್ನ್ ಬಿಲ್‌ಗಳು ಗಂಡಿಗಿಂತ ಚಿಕ್ಕದಾಗಿರುತ್ತವೆ. ಅಲ್ಲದೆ ಇವುಗಳ ಕಣ್ಣುಕುಳಿಯ ಚರ್ಮ ಕಡುಕೆಂಪು ಬಣ್ಣದಲ್ಲಿದ್ದರೂ, ಕೆಂಪು ಕಣ್ಣುಗಳ ಬದಲಿಗೆ ನಸುನೀಲಿ ಮಿಶ್ರಿತ ಬಿಳಿಬಣ್ಣದ ಕಣ್ಣುಗಳನ್ನು ಹೊಂದಿರುತ್ತವೆ. ಇತರ ಹಾರ್ನ್‌ಬಿಲ್ ಗಳಂತೆ ಇವುಗಳು ಕೂಡ ಆಕರ್ಷಕ



ಕಣ್ಣಿನ ರೆಪ್ಪೆಗಳನ್ನು ಹೊಂದಿರುತ್ತವೆ. ಹೆಣ್ಣು ಹಾರ್ನ್ ಬಿಲ್‌ಗಳಲ್ಲಿ ಶಿರಸ್ತ್ರಾಣದ ಹಿಂಭಾಗವು ನಸುಗೆಂಪಾಗಿರುತ್ತದೆ. ಗಂಡುಗಳಲ್ಲಿ ಶಿರಸ್ತ್ರಾಣದ ಮುಂಭಾಗ ಮತ್ತು ಹಿಂಭಾಗದ ಕೆಳಭಾಗ ಕಪ್ಪಾಗಿರುತ್ತದೆ.

ಹಾರ್ನ್ ಬಿಲ್ ಕುಟುಂಬದ ಇತರ ಪ್ರಭೇದಗಳಂತೆ ಇವು ಕೂಡ, ಅತಿಯಾದ ಟೊಳ್ಳಾದ ಮೂಳೆಗಳನ್ನು ಹೊಂದಿದ್ದು, ಟೊಳ್ಳಾದ ಗಾಳಿಗೂಡುಗಳೊಂದಿಗೆ ಅವುಗಳ ರೆಕ್ಕೆಯ ಎಲುಬಿನ ತುದಿಗಳವರೆಗೆ ವಿಸ್ತರಿಸಿದೆ. ಇದು ರಿಚರ್ಡ್ ಓವೆನ್ ಅವರು ಗಮನಿಸಿದಂತಹ ಅಂಗರಚನಶಾಸ್ತ್ರದ ಗುಣಲಕ್ಷಣ ಎನ್ನಬಹುದು. ಸಾಮಾನ್ಯವಾಗಿ ಸದಾ ಹಸುರಿನ ಮಳೆ ಕಾಡು ಮತ್ತುತೇವ ಭರಿತ ಎಲೆ ಉದುರಿಸುವ ಕಾಡುಗಳಲ್ಲಿ ಇವು ವಾಸಿಸುತ್ತವೆ.

■ ಯು.ಎ.